ಪ್ರತಿಬಿಂಬ

**PRATIBIMBA –** **Multidisciplinary Kannada Research Journal of IIMRD**
**ISSN: 2582-2284**
**Vol-2 Issue 3, Nov-Dec 2020, 36-45**
**©*IIMRD*, Mysuru**
IIMRD JOURNALS
**www.iimrd.com**

# ಹತ್ತಿಗಿರಣಿ ಉದ್ಯಮಿಗಳು ಮತ್ತು ದುಡಿಮೆಗಾರರು ಎದುರಿಸುತ್ತಿರುವ ಸಮಸ್ಯೆಗಳು: ಸಮಾಜಶಾಸ್ತ್ರೀಯ ಅವಲೋಕನ

**ಪ್ರಕಾಶ್ ಎಚ್.ಬಿ.[1] ಮತ್ತು ಡಾ. ದೊಡ್ಡಮನಿ ಲೋಕರಾಜ್.[2]**

## ಪೀಠಿಕೆ

ಮಾನವ ಕುಲದ ಒಂದು ದೊಡ್ಡ ಆವಿಷ್ಕಾರವೆಂದರೆ ಹತ್ತಿ, ಭಾರತದಲ್ಲಿ ಹತ್ತಿ ಉತ್ಪಾದನೆಯು ಸಾವಿರಾರು ವರ್ಷಗಳಿಂದ ಜವಳಿಗಳ ಮೇಲೆ ಕೇಂದ್ರೀಕರಿಸಿದೆ, ನುರಿತ ಮತ್ತು ಕೌಶಲ್ಯರಹಿತ ಕಾರ್ಮಿಕರಿಗೆ ಗಮನಾರ್ಹ ಉದ್ಯೋಗವನ್ನು ಸೃಷ್ಟಿಸುತ್ತದೆ. ಇದರಿಂದಾಗಿ ದೇಶದ ಆರ್ಥಿಕತೆಯನ್ನು ಬಲಪಡಿಸಲು ಸಹಾಯ ಮಾಡುತ್ತದೆ. ಭಾರತದ ಹತ್ತಿ ವಲಯವನ್ನು ಜವಳಿ ಉದ್ಯಮದಲ್ಲಿ ಎರಡನೇ ಅತ್ಯಂತ ಅಭಿವೃದ್ಧಿ ಹೊಂದಿದ ಕ್ಷೇತ್ರವೆಂದು ಪರಿಗಣಿಸಲಾಗಿದೆ. ಭಾರತವು ವಿಶ್ವದ ಅತಿದೊಡ್ಡ ಹತ್ತಿ ಉತ್ಪಾದಕ ರಾಷ್ಟ್ರ. ಜಗತ್ತಿನ ಒಟ್ಟು ಉತ್ಪಾದನೆಯಲ್ಲಿ ಭಾರತದ ಪಾಲು ಶೇ.18. ಇದು ವಿಶ್ವದ ಸುಮಾರು 25% ರಷ್ಟು ಸಾಗುವಳಿ ಪ್ರದೇಶವನ್ನು ಪ್ರತಿನಿಧಿಸುತ್ತದೆ. ಗುಜರಾತ್, ಮಹಾರಾಷ್ಟ, ಆಂಧ್ರಪ್ರದೇಶ, ಹರಿಯಾಣ, ಪಂಜಾಬ್, ಮಧ್ಯಪ್ರದೇಶ, ರಾಜಸ್ಥಾನ, ಕರ್ನಾಟಕ ಮತ್ತು ತಮಿಳುನಾಡು ರಾಜ್ಯಗಳು ಭಾರತದ ಪ್ರಮುಖ ಹತ್ತಿ ಉತ್ಪಾದಿಸುವ ಪ್ರದೇಶಗಳಾಗಿವೆ. ಪ್ರಸ್ತುತ ಲೇಖನದಲ್ಲಿ ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಖ್ಯಾತಿಯಾಗಿದ್ದ ಹತ್ತಿಗಿರಣಿಗಳ ಐತಿಹಾಸಿಕ ಹಿನ್ನೆಲೆ, ದುಡಿಮೆಗಾರರ ಸ್ಥಾನಮಾನಗಳು, ದುಡಿಮೆಗಾರರ ಸಮಸ್ಯೆಗಳು ಹಾಗು ಉದ್ಯಮ ಎದುರಿಸುತ್ತಿರುವ ಸಮಸ್ಯೆಗಳನ್ನು ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿಮರ್ಶಿಸಲಾಗಿದೆ.

## ಅಧ್ಯಯನದ ಉದ್ದೇಶಗಳು

- ಹತ್ತಿಗಿರಣಿ ಉದ್ಯಮಿಗಳು ಮತ್ತು ದುಡಿಮೆಗಾರರ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದು.
- ಹತ್ತಿಗಿರಣಿ ಸಮಸ್ಯೆಗಳನ್ನು ತಿಳಿದುಕೊಳ್ಳುವುದು.

## ಅಧ್ಯಯನದ ವಿಧಾನ

ಪ್ರಮುಖವಾಗಿ ಅಧ್ಯಯನ ವಿಧಾನವು ಪ್ರಾಥಮಿಕ ಹಾಗೂ ಅನುಷಂಗಿಕ ಮಾಹಿತಿಯನ್ನು ಆಧರಿಸಿರುತ್ತದೆ. ಪ್ರಸ್ತುತ ಅಧ್ಯಯನವು ಅನುಷಂಗಿಕ ಮಾಹಿತಿಯನ್ನು ಆಧರಿಸಿದ್ದು ಈ ಮಾಹಿತಿಯನ್ನು

---

[1] *ಸಂಶೋಧಕರು (ಸಮಾಜಶಾಸ್ತ್ರ), ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ ಹಾಗೂ ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಶ್ರೀ.ಮಂಜುನಾಥಸ್ವಾಮಿ ಪ್ರ.ದ.ಕಾಲೇಜು, ದಾವಣಗೆರೆ.*

[2] *ಮಾರ್ಗದರ್ಶಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ ಹಾಗೂ ಸಹಾಯಕ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸ.ಪ್ರ.ದ.ಕಾಲೇಜು, ಜಗಳೂರು.*

ಲಭ್ಯವಿರುವ ಪುಸ್ತಕಗಳು, ಲೇಖನಗಳು ಹಾಗೂ ವರದಿಗಳನ್ನು ಮುಂತಾದ ಮೂಲಗಳಿಂದ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ.

**ಸಾಹಿತ್ಯ ಪರಾಮರ್ಶೆ**

ರಂಗ ಎನ್ ಜಿ (1930), ರವರು ತಮ್ಮ ಅಧ್ಯಯನದಲ್ಲಿ ಆಂದ್ರಪ್ರದೇಶ ಮತ್ತು ಮದ್ರಾಸ್‌ನ ಕೆಲವು ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ದುಡಿಮೆಗೆ ಮೊದಲು ಮತ್ತು ನಂತರದ ಸ್ಥಿತಿಗತಿಗಳನ್ನು ವಿವರಿಸುವುದರ ಜೊತೆ ಕೆಲಸದಲ್ಲಿನ ಸುಧಾರಣೆ ಮತ್ತು ಪರಿಹಾರ ಕ್ರಮಗಳು ದುಡಿಮೆಗಾರರ ಸ್ಥಿತಿಗತಿಗಳನ್ನು ಉತ್ತಮೀಲರಿಸಲು ಸಲಹೆಗಳನ್ನು ನೀಡಿದ್ದಾರೆ.

ಬೆಡೇಕರ್ ಏ.ವೈ (1984) ಅವರು ತಮ್ಮ ಸಂಶೋಧನಾ ಮಹಾಪ್ರಬಂಧದಲ್ಲಿ ವಿವರಿಸಿರುವಂತೆ ದುಡಿಮೆಗಾರರ ಆರ್ಥಿಕ ಪರಿಸ್ಥಿತಿಗಳು, ಆರ್ಥಿಕ ಬೆಳವಣಿಗೆ ಮತ್ತು ಜೀವನ ಶೈಲಿಯಲ್ಲಿನ ಬದಲಾವಣೆಗಳು ಹಾಗೂ ಸಾಮಾಜಿಕ ಅಂತಸ್ತು ಮತ್ತು ಸ್ಥಾನಮಾನಗಳ ಕುರಿತು ವಿವರಿಸಿದ್ದಾರೆ, ಅವರ ಆರ್ಥಿಕ ಪರಿಸ್ಥಿತಿಗಳಾದ ಜೀವನ ನಿರ್ವಹಣೆಯಲ್ಲಿನ ಕಷ್ಟ ಮೂಲಭೂತ ಅಗತ್ಯತೆಯ ಪೂರೈಕೆಯಲ್ಲಿನ ತೊಂದರೆಗಳು, ಉಳಿತಾಯದ ಸಮಸ್ಯೆ, ಪ್ರಸ್ತುತ ಜೀವನ ಕ್ರಮದಲ್ಲಿನ ಬದಲಾವಣೆಗಳು ಮುಂತಾದ ವಿಷಯಗಳ ಬಗ್ಗೆ ಚರ್ಚಿಸಿದ್ದಾರೆ.

ಪ್ರೇಮಿರ್ (1993) ರವರು ಭಾರತದ ಆರ್ಥಿಕತೆಯಲ್ಲಿ ಹತ್ತಿಗಿರಣಿ ಕಾರ್ಖಾನೆಗಳು ಮಹತ್ತರವಾಗಿದ್ದು, ಮೊದಲು ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ರಫ್ತಿನೊಂದಿಗೆ ಲಾಭದಲ್ಲಿತ್ತು. ಕೃಷಿಯ ನಂತರ 2 ನೇ ಸ್ಥಾನವನ್ನು ಪಡೆದಿದ್ದು, ಕೆಲಸಗಾರರು ಹತ್ತಿ ಗಿರಣಿಗಳಲ್ಲಿ ತೊಡಗಿದ್ದರ ಪ್ರತಿಫಲವೇ 35 ಮಿಲಿಯನ್ ವ್ಯಕ್ತಿಗಳು ಹತ್ತಿ ಗಿರಣಿಗಳಲ್ಲಿ ಕೆಲಸಗಾರರಾಗಿದ್ದಾರೆ. ಹತ್ತಿ ಗಿರಣಿಗಳು ಅಭಿವೃದ್ಧಿಯನ್ನು ಹೊಂದಿದ್ದು, ಹತ್ತಿ ಉತ್ಪಾದನೆಯಲ್ಲಿ 3 ನೇ ಸ್ಥಾನ ಪಡೆದಿರುವ, ರೇಷ್ಮೇ ಉತ್ಪಾದನೆಯಲ್ಲಿ 2 ನೇ ಸ್ಥಾನವನ್ನು, ಸಿಂಥೆಟಿಕ್ ಫೈಬರ್ ಉತ್ಪಾದನೆಯಲ್ಲಿ 5 ನೇ ಸ್ಥಾನವನ್ನು ಹೊಂದಿದೆ ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಅಂಜಿನಪ್ಪ ಬಿ ಎಚ್ (1998) ರವರು ತಮ್ಮ "ಹತ್ತಿ ಹಿಂಜುವ ಕಾರ್ಖಾನೆಗಳಲ್ಲಿ ಮಹಿಳಾ ಕಾರ್ಮಿಕರ ಸಾಮಾಜಿಕ ಆರ್ಥಿಕ ಸ್ಥಿತಿಗತಿಗಳು" ಎಂಬ ನಿಬಂಧದಲ್ಲಿ ಮಹಿಳೆಯರು ಪುರುಷರಂತೆಯೇ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದು ಅವರಿಗೆ ದುಡಿಯುವ ಪರಿಸರದಲ್ಲಿ ನ್ಯಾಯಬದ್ಧವಾದ ಸೌಲಭ್ಯಗಳು ದೊರೆಯದೇ ಇರುವ ವಿಷಯವನ್ನು ಚರ್ಚಿಸಿದ್ದಾರೆ. ಕಾರ್ಲ‌ಮಾರ್ಕ್ಸ ಮತ್ತು ಏಂಜೆಲ್ಸ್‌ರವರ ಚಿಂತನೆಗಳನ್ನು ವಿವರಿಸುತ್ತಾ ಶೋಷಣೆಗೊಳಗಾಗಿದ್ದ ಶ್ರಮ ಜೀವಿಗಳ ಮತ್ತು ರೈತರ ಸಂಕಷ್ಟಗಳನ್ನು ಪರ್ಯಾಲೋಚಿಸಿದ ರಷ್ಯಾದ ಕಾರ್ಲಮಾರ್ಕ್ಸ ಮತ್ತು ಏಂಜೆಲ್ಸ್ ರವರು ಕಮ್ಯೂನಿಸ್ಟ್ ತತ್ವಗಳನ್ನು ರೂಪಿಸಿ ಬಂಡವಾಳಗಾರರ ಬಣ್ಣವನ್ನು ಬಯಲಿಗೆಳೆದುದೆ ಅಲ್ಲದೇ ಕಾರ್ಮಿಕರ ಕಣ್ಣನ್ನು ತೆರೆಸಿದರು. ಲೆನಿನ್ ತನ್ನ ಧೀರ ನಾಯಕತ್ವದಲ್ಲಿ ಕಾರ್ಮಿಕರನ್ನು ಹೋರಾಟದ ಯಶಸ್ವಿಯತ್ತ ಮುನ್ನೆಡೆಸಿದರು. ಆ ಮಹಾಕ್ರಾಂತಿಯ ಪರವಾಗಿ ಪ್ರಪಂಚದಲ್ಲಿ ಮೊದಲಬಾರಿಗೆ ರಾಷ್ಟ್ರವೊಂದರ ಅಧಿಕಾರ ಶ್ರಮಿಕರ ಕೈಗೆ ಬಂದಿತು. 1859–60ರ ಭಾರತದಲ್ಲಿ ಆಧುನಿಕ ಕೈಗಾರಿಕೆಗಳು ಪ್ರಾರಂಭವಾಗಿ ಕಾರ್ಖಾನೆ ಪದ್ಧತಿ ಜಾರಿಗೆ ಬರಲು 1870ರ

ಭಾರತದಲ್ಲಿ ಕಾರ್ಮಿಕ ಆಂದೋಲನ ಜನ್ಮ ತಾಳಿತು. 1890 ರಲ್ಲಿ ಲೋಕಾಂಡೆ ಸ್ಥಾಪಿಸಿದ 'ಹತ್ತಿ ಗಿರಣಿ ಕೆಲಸಗಾರರ ಸಂಘ'ವೇ ಭಾರತದ ಪ್ರಥಮ ಕಾರ್ಮಿಕ ಸಂಘಟನೆ ಎನ್ನಬಹುದು ಎಂದು ಹೇಳಿದ್ದಾರೆ.

ಕೋಮಲ ಎ ಸಿ (2001) ರವರು ತಮ್ಮ ಮಹಾ ಪ್ರಬಂಧದಲ್ಲಿ ಕೈಗಾರಿಕ ಕ್ರಾಂತಿಯ ನಂತರ ದಲ್ಲಿ ಆರ್ಥಿಕ ಚಟುವಟಿಕೆಯಲ್ಲಿ ಮಹಿಳೆಯರ ಪಾತ್ರ ಅತೀವವಾಗಿ ಬದಲಾಗಿದೆ ಎಂದು ತಿಳಿಸುತ್ತಾರೆ. ಭಾರತೀಯ ಇತಿಹಾಸದ ಮೊದಲಲ್ಲಿ ಮಹಿಳೆಯರಿಗೆ ಉನ್ನತ ಸಾಮಾಜಿಕ ಸ್ಥಾನಮಾನವಿತ್ತು ಅನೇಕರನ್ನು ಅವರ ಶಿಕ್ಷಣದಿಂದ ಗುರುತಿಸುತ್ತಿದ್ದರು ಆದರೆ ಕಾಲಾಂತರದಲ್ಲಿ ಉಂಟಾದ ಸಾಮಾಜಿಕ, ರಾಜಕೀಯ, ಆರ್ಥಿಕ ಬದಲಾವಣೆಗಳಿಂದ ಮಹಿಳೆಯರನ್ನು ಅವರ ಹಕ್ಕುಗಳಿಂದ ದೂರ ಮಾಡಲಾಯಿತು. ಭಾರತದಲ್ಲಿ ನವೋದಯ ಕಾಲದಿಂದ ಅಲ್ಪ ಸ್ವಲ್ಪ ಬದಲಾವಣೆಗಳು ಪ್ರಾರಂಭವಾದವು. ಸ್ವಾತಂತ್ರ್ಯ ನಂತರ ಸಂವಿಧಾನದಲ್ಲಿ ಮಹಿಳೆಯರಿಗಾಗಿ ಸಮಾನ ಅವಕಾಶಗಳನ್ನು ನೀಡಲಾಯಿತು ಎಂದು ಹೇಳಿದ್ದಾರೆ.

ಚಿನ್ನೇ ಎಂ.ಡಿ (2002), ಇವರು ತಮ್ಮ ಸಂಶೋಧನಾ ವಿಷಯದಲ್ಲಿ ಕೆಲಸಗಾರರ/ದುಡಿಮೆಗಾರರ ವಲಸೆಯ ಪ್ರಕಾರಗಳು/ ಮಾದರಿಗಳು, ದುಡಿಮೆಗಾರರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳು ಮತ್ತು ಹತ್ತಿ ಗಿರಣಿಗಳ ಸಮಸ್ಯೆಗಳು ಮತ್ತು ಪ್ರಚಲಿತ ವ್ಯವಸ್ಥೆಯಲ್ಲಿ ಅವುಗಳ ಸ್ಥಿತಿಯನ್ನು ವಿವರಿಸಿದ್ದಾರೆ.

ಕುಮಾರ್ ಬಿ ಪಿ (2007) ರವರು 'ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕರ ಚಳುವಳಿಗಳು' ಎಂಬ ಮಹಾಪ್ರಬಂಧದಲ್ಲಿ ಹತ್ತಿ ಗಿರಣಿಗಳಿಗೆ ಸಂಬಂಧಿಸಿದಂತೆ ಇದೊಂದು ಅಲಕ್ಷಿತ ಕ್ಷೇತ್ರ ಇಲ್ಲಿರುವ ಸಮಸ್ಯೆಗಳು, ಕಾರ್ಮಿಕರು ದುಡಿಯುವ ವರ್ಗವಾಗಿ ಕಷ್ಟ ನಷ್ಟ–ನೋವು ಹೀಗೆ ಏಳು ಬೀಳುಗಳನ್ನು ಅನುಭವಿಸಿದ ಪರಿಯನ್ನು ಕಾರ್ಮಿಕರ ಸಂಘಟನೆಯಿಂದ ಗಿರಣಿಗಳು ಅವಸಾನ ಹೊಂದ್ದಿದ್ದವೋ ಅಥವಾ ಗಿರಣಿಗಳ ಅಸಮರ್ಪಕ ಆಡಳಿತದಿಂದ ಕಾರ್ಮಿಕ ಚಳುವಳಿಗಳು ಜಾಗತೀಕರಣ ಸಂದರ್ಭದಲ್ಲಿ ಕಾರ್ಮಿಕರು ಮತ್ತು ಗಿರಣಿ ಮಾಲೀಕರು ಎದುರಿಸುವ ಸಮಸ್ಯೆ ಸವಾಲುಗಳನ್ನು ಕಾರ್ಮಿಕರ ಸಾಮಾಜಿಕ ಸ್ಥಿತಿಗತಿಗಳನ್ನು ವಿವರಿಸಿದ್ದಾರೆ.

ಖಲ್ಲಾರ್ ಡಿ ಆರ್ (2011) ರವರು ತಮ್ಮ ಗ್ರಂಥದಲ್ಲಿ ಹತ್ತಿ ಗಿರಣಿಗಳು ಬೆಳೆದು ಬಂದದಾರಿ, ಮದ್ರಾಸ್ ರಾಜ್ಯದಲ್ಲಿ ಮೊಟ್ಟಮೊದಲ ಜಿನ್ನಿಂಗ್ ಸಹಕಾರಿ ಸಂಘ ಸ್ಥಾಪನೆಯಾಗಿದ್ದರ ಕುರಿತು ವಿವರಿಸಿದ್ದಾರೆ. ಕೊಲ್ಲಾಪುರದಲ್ಲಿ 1906 ರಲ್ಲಿ ಛತ್ರಪತಿ ಶಾಹು ಮಹರಾಜ್‌ರವರಿಂದ ಹತ್ತಿ ಗಿರಣಿ ಪ್ರಾರಂಭವಾಯಿತು, ಇದು ಶಾಹು ಮಿಲ್ ಎಂದು ಜನಪ್ರಿಯತೆ ಪಡೆದಿದೆ. ಇಂತಹ ಅನೇಕ ಗಿರಣಿಗಳು ಬಹಳಷ್ಟಿದ್ದು ಆದ್ದರಿಂದಲೇ ಮಹರಾಷ್ಟ್ರದ ಕೊಲ್ಲಪುರ ಜಿಲ್ಲೆಯ ಇಚಲಕಾರಂಜಿಯನ್ನು "ಮ್ಯಾಂಚೆಸ್ಟರ್ ಆಫ್ ಮಹರಾಷ್ಟ್ರ" ವೆಂದು ಕರೆಯಲಾಗಿದೆ.

ಜೆಬದೊರೈ (2013) ವಿವರಿಸುವಂತೆ ತಮಿಳುನಾಡಿನ ಹತ್ತಿ ಇಂಜುವ ಗಿರಣಿಗಳಲ್ಲಿನ ದುಡಿಮೆಗಾರರ ವೃತ್ತಿ ತೃಪ್ತಿ ಮತ್ತು ಕೆಲಸ ಮಾಡುವ ಸ್ಥಳದ ಪರಿಸರದ ಬಗ್ಗೆ ಅಧ್ಯಯನ ಮಾಡಿದ್ದಾರೆ. ಅವರು ತಮ್ಮ ಅಧ್ಯಯನದಲ್ಲಿ ದುಡಿಮೆಗಾರರಿಗೆ ಸಂಬಂಧಿಸಿದ ಜಾರಿಗೆ ಬಂದ ಅಭಿವೃದ್ಧಿ ಯೋಜನೆಗಳು ತೃಪ್ತಿದಾಯಕವಾಗಿಲ್ಲ, ಸರಕಾರವು ಇಂತವರಿಗೆ ನಿಯಮಗಳನ್ನು ರೂಪಿಸುವುದರ ಜೊತೆಗೆ

ದುಡಿಮೆಗಾರರು ಉತ್ತಮ ಪರಿಸರದೊಂದಿಗೆ ಕೆಲಸ ನಿರ್ವಹಿಸಲು ಅವಕಾಶ ಕೊಡುವುದರ ಬಗ್ಗೆ ತಿಳಿಸಿದ್ದಾರೆ.

ಸುಧಾಕರ್ ವಿಷ್ಣು ಚೌಗುಲೆ (2015) ರವರು ತಮ್ಮ ಸಂಶೋಧನಾ ಲೇಖನದಲ್ಲಿ ತಿಳಿಸಿರುವಂತೆ ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಹತ್ತಿಗಿರಣಿಗಳ ಪಾತ್ರವು ಮುಖ್ಯವಾಗಿದ್ದರ ಕುರಿತು ವಿವರಿಸಿದ್ದಾರೆ. ಶೇ 30 ರಷ್ಟು ರಫ್ತನ್ನು ಹೊಂದಿದ್ದು, ಶೇ 20 ರಷ್ಟು ಉತ್ಪಾದನೆ ಹತ್ತಿ ಗಿರಣಿಗಳಿಂದ ಬರುತ್ತಿದ್ದು, ಉದ್ಯೋಗವು 15 ಮಿಲಿಯನ್ ರಷ್ಟು ಕಂಡು ಬಂದಿದ್ದು ಚೀನಾ, ಅಮೇರಿಕಾದಂತ ರಾಷ್ಟ್ರಗಳಂತೆ ಭಾರತವು ಸಹ ಹತ್ತಿ ಉತ್ಪನ್ನ ವಸ್ತುಗಳ ಉತ್ಪಾದನೆಯಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ ಎಂದು ಹೇಳಿದ್ದಾರೆ.

ವರ್ಗಿಸ್ ಮತ್ತು ಸಲೀಂ (2015), ತಮ್ಮ ಲೇಖನದಲ್ಲಿ ಹತ್ತಿ ಕೈ ಮಗ್ಗದಲ್ಲಿನ ಸವಾಲುಗಳು ಮತ್ತು ಪ್ರಸ್ತುತ/ಜ್ವಲಂತ ಸಮಸ್ಯೆಗಳನ್ನು ಕೇರಳ ರಾಜ್ಯವನ್ನಾಧರಿಸಿ ವಿವರಿಸಿದ್ದಾರೆ ವೃತ್ತಿಪರ ತಂತ್ರಜ್ಞಾನದ ಕೊರತೆ, ಆಡಳಿತ ಕೌಶಲ್ಯದ ಕೊರತೆ, ಬಂಡವಾಳದ ಕೊರತೆ, ಹೊರ ರಾಜ್ಯಗಳ ವಿದ್ಯುತ್ ಮಗ್ಗ ನೆಲೆಗಳಿಂದ ಅತಿಯಾದ ಸ್ಪರ್ಧೆ, ಅಗತ್ಯಕ್ಕೆ ತಕ್ಕಂತೆ ಉತ್ಪಾದನಾ ಪೂರೈಕೆಗಳ ಕೊರತೆ ಇಂತಹ ಎಲ್ಲಾ ಸಮಸ್ಯೆಗಳನ್ನು ವಿವರಿಸಿದ್ದಾರೆ. ಸುತ್ತಮುತ್ತಲ ರಾಜ್ಯಗಳಲ್ಲಿನ ಆಧುನಿಕ ತಂತ್ರಜ್ಞಾನದೊಂದಿಗೆ ಉತ್ಪಾದನೆಗೊಳ್ಳುತ್ತಿರುವ ಪವರ್‌ಲೂಮ್‌ಗೆ ಹೆಚ್ಚಿನ ಆದ್ಯತೆ, ಕೇರಳದ ಹತ್ತಿ ಗಿರಣಿಗಳು ಇಂತಹ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ವಿಮರ್ಶಾತ್ಮಕವಾಗಿ ವಿವರಿಸಿದ್ದಾರೆ.

ಹರೀಶ ತಿಗರಿ (2019) ಇವರು ತಮ್ಮ ಲೇಖನದಲ್ಲಿ ಭಾರತದಲ್ಲಿ ಶೇಕಡ 90 ರಷ್ಟು ಕಾರ್ಮಿಕರು ಅಸಂಘಟಿತ ವಲಯಕ್ಕೆ ಸೇರಿದವರಾಗಿದ್ದಾರೆ. ಸರ್ಕಾರದ ಪ್ರಕಾರ 47.5 ಕೋಟಿ ಕಾರ್ಮಿಕರು ಈ ವಲಯದಲ್ಲಿ ದುಡಿಯುತ್ತಿದ್ದಾರೆ. ಅದರಲ್ಲಿ ಶೇ 65 ರಷ್ಟು ಮಹಿಳೆಯರು, 24 ಕೋಟಿಗೂ ಅಧಿಕ ಜನರು ಕೃಷಿ ಕ್ಷೇತ್ರದಲ್ಲಿ, 405 ಕೋಟಿ ಜನ ನಿರ್ಮಾಣ ಕ್ಷೇತ್ರದಲ್ಲಿ, ಉಳಿದವರು ಇತರೆ ಸರಕು ಮತ್ತು ಸೇವೆಗಳ ಉತ್ಪನ್ನ ಮತ್ತು ವಿತರಣೆಯ ವಲಯಗಳಲ್ಲಿ ತೊಡಗಿಸಿಕೊಂಡಿದ್ದಾರೆ. ವೃತ್ತಿ ನೈಪುಣ್ಯತೆ ಇಲ್ಲದ ಕಾರ್ಮಿಕರಿಗೆ ಯಾವುದೇ ಸಾಮಾಜಿಕ, ಆರ್ಥಿಕ ಭದ್ರತೆಯಾಗಲಿ ಅಥವಾ ಸಂಘಟಿತ ವಲಯಕ್ಕೆ ದೊರೆಯುತ್ತಿರುವ ಯಾವುದೇ ಸೌಲಭ್ಯಗಳಿಲ್ಲ. ಪ್ರತಿ ನಿತ್ಯ ಕೆಲಸ ಸಿಗದಿರುವ ಬಗ್ಗೆ, ಸಿಕ್ಕರೂ ನಿಗಧಿತ ಕೂಲಿಯ ಕೊರತೆ ಇಂತಹ ವಿಷಯಗಳ ವಿವರಣೆಗಳನ್ನು ನೀಡಿದ್ದಾರೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಹತ್ತಿಗಿರಣಿಯಲ್ಲಿ ಕಾರ್ಯನಿರ್ವಸುತ್ತಿರುವ ಅನೇಕ ಕಾರ್ಮಿಕರು ವಿವಿಧ ರೀತಿಯ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ. ವೈವಿಧ್ಯಮಯವಾದ ಆಧುನಿಕ ತಂತ್ರಜ್ಞಾನವುಳ್ಳ ಉದ್ಧಿಮೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಹಳೆಯ ತಂತ್ರಜ್ಞಾನವುಳ್ಳ ಉದ್ದಿಮೆಗಳು ಅವಸಾನ ಹೊಂದುತ್ತಿವೆ. ಅದರಲ್ಲೂ ಹತ್ತಿ ಕೈಗಾರಿಕೋದ್ಯಮಕ್ಕೆ ಸಂಬಂಧಿಸಿದಂತೆ ಹತ್ತಿ ಬಟ್ಟೆಗಳಿಗಿಂತ ವಿವಿಧ ರೀತಿಯ ಸಿಂತೆಟಿಕ್, ಫೈಬರ್, ಸ್ಪನ್, ಪಾಲಿಸ್ಟರ್ ಮುಂತಾದ ರೀತಿಯ ಹೊಸ ಹೊಸ ಮಾದರಿಯ ಬಟ್ಟೆಗಳು ಮಾರುಕಟ್ಟೆಗೆ ಬರುವುದರಿಂದ ಜನರು ಹೊಸ ವಿನ್ಯಾಸಗಳಿಗೆ ಮಾರು ಹೋಗುವುದರಿಂದ ಹತ್ತಿ ಉತ್ಪಾದನೆಯಿಂದ ಬರುವ ವಸ್ತುಗಳಿಗೆ ಮಾರುಕಟ್ಟೆ

ಕೊರತೆಯಾಗಿರುವುದು ಹತ್ತಿ ಪೂರೈಕೆಯ ಕೊರತೆಯಿಂದಾಗಿ ಅನೇಕ ಸಣ್ಣ ಪುಟ್ಟ ಜಿನ್ನಿಂಗ್ ಮಿಲ್‌ಗಳು ಹಂತ ಹಂತವಾಗಿ ಮುಚ್ಚುತ್ತಾ ಬರುತ್ತಿವೆ. ಇದರಿಂದಾಗಿ ಮಾಲೀಕರು ಆರ್ಥಿಕ ನಷ್ಟ ಹೊಂದುವುದರ ಜೊತೆಗೆ ತಮ್ಮನ್ನು ನಂಬಿಕೊಂಡ ದುಡಿಮೆಗಾರರಿಗೆ ಕೆಲಸವನ್ನು ಉಳಿಸಿಕೊಡುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಇದರಿಂದಾಗಿ ಬಹುತೇಕ ಕಾರ್ಮಿಕರು ಅಥವಾ ದುಡಿಮೆಗಾರರು ಕೆಲಸ ಕಳೆದುಕೊಂಡು ಆದಾಯದ ಮೂಲವನ್ನೆ ಕಳೆದುಕೊಂಡು ಸಂಕಷ್ಟದಲ್ಲಿರುವುದು. ಕೆಲವರು ಬೇರೊಂದು ಕಡೆ ಕೆಲಸವನ್ನು ಹುಡಿಕಿಕೊಂಡು ಹೋಗುತ್ತಿದ್ದಾರೆ, ಅಲ್ಲದೆ ಕಡಿಮೆ ಕೂಲಿ ಕೆಲಸಗಳನ್ನು ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ನೈಪುಣ್ಯತೆ ಇರುವವರೂ ಸಹ ಕೆಲಸ ಕಳೆದುಕೊಂಡು ಬೇರೆ ಕ್ಷೇತ್ರದಲ್ಲಿ ಮಾಲೀಕರು ನಿಗಧಿಪಡಿಸಿದ ಕೂಲಿಗೆ ಕೆಲಸ ಮಾಡುವಂತಾಗಿದೆ.

**ಭಾರತದಲ್ಲಿ ಹತ್ತಿ ಗಿರಣಿಗಳ ಹಿನ್ನೆಲೆ**

ದೇಶಗಳಲ್ಲಿ ಬಹುದಿನಗಳಿಂದಲೂ ನಡೆದುಕೊಂಡು ಬಂದಿರುವ ಸುಸಂಘಟಿತವಾದ ಕೈಗಾರಿಕೆಗಳಲ್ಲಿ ಹತ್ತಿಗಿರಣಿ ಕೈಗಾರಿಕೆ ಒಂದಾಗಿದೆ. ಭಾರತದಲ್ಲಿ ಇದು ಅಗ್ರ ಸ್ಥಾನವನ್ನು ಹೊಂದಿದೆ. ಸುಮಾರು 11.5 ಲಕ್ಷ ಜನರಿಗೆ ಅದು ನೇರ ಉದ್ಯೋಗ ಒದಗಿಸಿದೆ. ಸಂಘಟಿತ ವಲಯದ ಒಟ್ಟು ಉದ್ಯೋಗಸ್ಥರಲ್ಲಿ ಶೇ 18 ರಷ್ಟು ಜನ ಇದರಲ್ಲಿ ತೊಡಗಿದ್ದಾರೆ. ಇದಲ್ಲದೆ, ಈ ಕೈಗಾರಿಕೆ ಪರೋಕ್ಷವಾಗಿ ಲಕ್ಷಾಂತರ ಜನರಿಗೆ ಉದ್ಯೋಗವಕಾಶವನ್ನು ಒದಗಿಸಿದೆ. ಜಗತ್ತಿನಲ್ಲಿ ಹತ್ತಿ ಬಟ್ಟೆಯನ್ನು ಉತ್ಪಾದಿಸುವ ದೇಶಗಳಲ್ಲಿ ಭಾರತಕ್ಕೆ ಪ್ರಥಮ ಸ್ಥಾನ ಲಭಿಸಿದೆ. ಹತ್ತಿ ಜವಳಿ ವ್ಯಾಪಾರದಲ್ಲಿ ಭಾರತಕ್ಕೆ ಜಗತ್ತಿನಲ್ಲಿಯೇ ಎರಡನೇ ಸ್ಥಾನ ದೊರೆತಿದೆ. ನಮ್ಮ ರಫ್ತು ಸರಕುಗಳಲ್ಲಿ ಹತ್ತಿ ಜವಳಿಯು ಒಂದಾಗಿ ಪರಂಪರೆಯಿಂದ ನಡೆದು ಬಂದಿದೆ. ಈ ಕೈಗಾರಿಕೆಗಳಲ್ಲಿ ಹೂಡಿದ ಬಂಡವಾಳ 15 ನೂರು ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. 'ಮೊಟ್ಟ ಮೊದಲನೆಯ ಹತ್ತಿ ಗಿರಣಿಯು 1818ರಲ್ಲಿ ಕೊಲ್ಕತ್ತಾದ ಬಳಿ ಸ್ಥಾಪನೆಯಾಯಿತು. ಆ ನಂತರ ಮುಂಬೈ, ಸೊಲ್ಲಾಪುರ ಮತ್ತು ಅಹಮದಾಬಾದ್‌ಗಳಲ್ಲಿ ಗಿರಣಿಗಳು ಆರಂಭವಾದವು. ಈ ಕೈಗಾರಿಕೆಗೆ 1926ರಲ್ಲಿ ವಿದೇಶಿ ಉದ್ದಿಮೆಗಳ ಸ್ಪರ್ಧೆಯಿಂದ ರಕ್ಷಣೆ ನೀಡಲಾಯಿತು.ಸುಮಾರು 21 ವರ್ಷಗಳ ಕಾಲ ರಕ್ಷಣೆಯಲ್ಲಿ ಗಣನೀಯವಾಗಿ ಬೆಳೆದು ಬಂದಿದೆ. ದ್ವಿತೀಯ ವಿಶ್ವ ಯುದ್ಧದ ಸಮಯದಲ್ಲಿ ಈ ಕೈಗಾರಿಕೆಯು ಬರದಿಂದ ಅಭಿವೃದ್ಧಿ ಹೊಂದಿತು. ಜಪಾನಿನಿಂದ ಸರಬರಾಜಾಗುತ್ತಿದ್ದ ಬಟ್ಟೆಯು ಒಮ್ಮಿದೊಮ್ಮೆಗೆ ಸ್ಥಗಿತಗೊಂಡಿತು. ಇದರ ಜೊತೆಗೆ ಮಿತ್ರ ರಾಷ್ಟ್ರಗಳ ಸೇನಾಪಡೆಗಳಿಂದ ಭಾರತೀಯ ಬಟ್ಟೆಗೆ ಭಾರೀ ಬೇಡಿಕೆ ಉಂಟಾಯಿತು. ಇದರಿಂದಾಗಿ ಹತ್ತಿ ಗಿರಣಿಗಳು ಹಾಗೂ ಮಗ್ಗಗಳ ಸಂಖ್ಯೆ ಗಣನೀಯವಾಗಿ ಹೆಚ್ಚಿದವು. ಕ್ರಮೇಣ ಹತ್ತಿಗಿರಣಿಗಳು ಸೂರತ್, ನಾಗ್‌ಪುರ್, ಬೆಂಗಳೂರು, ಮಧುರೈ, ದಾವಣಗೆರೆ, ಕೋಯಿಮತ್ತೂರು, ಖಾನಾಪುರಗಳಲ್ಲಿ ಪ್ರಾರಂಭಗೊಂಡವು. 137ರಲ್ಲಿ ಕೇವಲ 389 ಹತ್ತಿ ಗಿರಣಿಗಳಿದ್ದು 2,02,464 ಮಗ್ಗಗಳಿದ್ದವು 1994ರಲ್ಲಿ ಮಾರ್ಚ ವೇಳೆಯಲ್ಲಿ ಹತ್ತಿ ಗಿರಣಿಗಳ ಸಂಖ್ಯೆ 1175ಕ್ಕೆ ಏರಿದೆ. ಇವುಗಳಲ್ಲಿ 906 ನೂಲುವ ಗಿರಣಿಗಳಿದ್ದು, 269 ನೂಲು/ನೇಯ್ಗೆ ಎರಡನ್ನು ಉಳ್ಳವಾಗಿವೆ. ದಾವಣಗೆರೆ ಹತ್ತಿಗಿರಣಿಗಳ ಚರಿತ್ರೆಯಲ್ಲಿ ದಾವಣಗೆರೆ ಪರಿಸರದಲ್ಲಿ ಅಳಿದಿರುವ, ಉಳಿದಿರುವ ಮತ್ತು ಅವಸಾನದ ಅಂಚಿನಲ್ಲಿರುವ ಗಿರಣಿಗಳನ್ನು ಈಗ ನೋಡಬಹುದು. ಅಳಿದಿರುವ ಗಿರಣಿಗಳಾದ ಶಂಕರ್, ಚಿಗಟೇರಿ, ಸಿದ್ಧೇಶ್ವರ ಮತ್ತು ಚಂದ್ರೋದಯ ಹತ್ತಿಗಿರಣಿಗಳೆಂದು

ಹೆಸರಿಸಬಹುದು. ಇತ್ತೀಚಿನ ಮಾಹಿತಿಯ ಪ್ರಕಾರ ಅಸ್ಥಿತ್ವ ಉಳಿಸಿಕೊಂಡಿರುವ ಗಿರಣಿಗಳೆಂದರೆ ಆಂಜನೇಯ ಮತ್ತು ಗಣೇಶ ಹತ್ತಿಗಿರಣಿಗಳು.

**ಕೋಷ್ಟಕ:01 ದೇಶದಲ್ಲಿರುವ ಹತ್ತಿ ಗಿರಣಿಗಳು**

| ರಾಜ್ಯ / ಕೇಂದ್ರಾಡಳಿತ ಪ್ರದೇಶಗಳು | ಗಿರಣಿಗಳು |
|---|---|
| ಆಂಧ್ರ ಪ್ರದೇಶ | 152 |
| ಅಸ್ಸಾಂ | 7 |
| ಬಿಹಾರ | 4 |
| ಛತ್ತೀಸಗಡ | 1 |
| ದಾದ್ರಾ ನಗರ ಹವೇಲಿ | 12 |
| ದಮನ್ & ಡಿಯು | 2 |
| ದೆಹಲಿ | 2 |
| ಗೋವಾ | 1 |
| ಗುಜರಾತ್ | 126 |
| ಹರಿಯಾಣ | 187 |
| ಹಿಮಾಚಲ ಪ್ರದೇಶ | 19 |
| ಜಮ್ಮು ಮತ್ತು ಕಾಶ್ಮೀರ | 2 |
| ಜಾರ್ಖಂಡ್ | 1 |
| ಕರ್ನಾಟಕ | 48 |
| ಕೇರಳ | 39 |
| ಮಧ್ಯಪ್ರದೇಶ | 65 |
| ಮಹಾರಾಷ್ಟ್ರ | 224 |
| ಮಣಿಪುರ | 1 |
| ಒರಿಸ್ಸಾ | 19 |
| ಪಾಂಡಿಚೆರಿ | 15 |
| ಪಂಜಾಬ್ | 151 |
| ರಾಜಸ್ಥಾನ | 81 |
| ತಮಿಳುನಾಡು | 2011 |
| ತೆಲಂಗಾಣ | 40 |
| ಉತ್ತರ ಪ್ರದೇಶ | 111 |
| ಉತ್ತರಾಂಚಲ್ | 14 |

IIMRD JOURNALS

| | |
|---|---|
| ಪಶ್ಚಿಮ ಬಂಗಾಳ | 30 |
| ಒಟ್ಟು | 3365 |

ಕೋಷ್ಟಕ 01ರಲ್ಲಿ ವಿವರಿಸಿರುವಂತೆ ದೇಶದಲ್ಲಿ 3365 ಹತ್ತಿ ಗಿರಣಿಗಳಿದ್ದು ಇದರಲ್ಲಿ ಬಹುಪಾಲು ತಮಿಳುನಾಡಿನಲ್ಲಿವೆ, ಒಟ್ಟು 2011 ಹತ್ತಿ ಗಿರಣಿಗಳು ಈ ರಾಜ್ಯದಲ್ಲಿವೆ, ಎರಡನೆ ಸ್ಥಾನದಲ್ಲಿ ಮಹಾರಾಷ್ಟ ಇದ್ದು ಒಟ್ಟು 224 ಗಿರಣಿಗಳಿವೆ, ಇತರ ರಾಜ್ಯಗಳಲ್ಲಿ ಪಂಜಾಬ್ 151, ಮಹಾರಾಷ್ಟ್ರ 224, ಹರಿಯಾಣ 187, ಗುಜರಾತ್ 126, ಆಂಧ್ರಪ್ರದೇಶ 152, ಉತ್ತರ ಪ್ರದೇಶ 111 ಹತ್ತಿ ಗಿರಣಿಗಳಿವೆ.

**ಹತ್ತಿಗಿರಣಿ ಉದ್ಯಮಿಗಳು ಮತ್ತು ಕಾರ್ಮಿಕರು ಎದುರಿಸುತ್ತಿರವ ಸಮಸ್ಯೆಗಳು**

ಹತ್ತಿಗಿರಣಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅನೇಕ ಕಾರ್ಮಿಕರು ಚರ್ಮದ ಅಲರ್ಜಿ, ಶ್ರವಣ ಸಮಸ್ಯೆ, ಕೆಮ್ಮು ಮತ್ತು ಸೀನುವುದು, ಉಸಿರಾಟದ ತೊಂದರೆ, ಅಲರ್ಜಿಕ್ ಬ್ರಾಂಕೈಟಿಸ್ ಮುಂತಾದ ಆರೋಗ್ಯ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ. ಇದರೊಂದಿಗೆ ತರಬೇತಿಯ ಕೊರತೆ, ಅನಕ್ಷರತೆ, ಕಡಿಮೆ ಶಿಕ್ಷಣ, ಸಾಮಾಜಿಕ ಅಭದ್ರತೆ, ಆರ್ಥಿಕ ಅಭದ್ರತೆ, ಕೆಲಸದ ಅಭದ್ರತೆ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ.

ಕಾರ್ಮಿಕರಂತೆ ಹತ್ತಿಗಿರಣಿ ಉದ್ಯಮಿಗಳು ಕೂಡ ಸ್ಪರ್ಧಾತ್ಮಕ ಪೈಪೋಟಿ, ಹೆಚ್ಚಿನ ಸುಂಕ, ಹಳೆಯ ತಂತ್ರಜ್ಞಾನ, ಸಬ್ಸಿಡಿಗ ವಿತರಿಸುವಲ್ಲಿ ಅನಗತ್ಯ ವಿಳಂಬ, ಹತ್ತಿ ಬೆಲೆಯಲ್ಲಿನ ಚಂಚಲತೆ ಹಲವಾರು ಸಮಸ್ಯೆಗಳನ್ನು ಎದರಿಸುತ್ತಿದ್ದಾರೆ. ಇದಲ್ಲದೆ ಮೂಲಭೂತ ಸೌಕರ್ಯ, ಅಸಮರ್ಪಕ ವಿದ್ಯುತ್, ಕಾರ್ಮಿಕರ ಕೊರತೆ, ಕಚ್ಚಾ ವಸ್ತುಗಳ ಅಲಭ್ಯತೆ, ಫ್ಯಾಬ್ರಿಕ್ ಸ್ಟಾಕ್ ಮುಂತಾದ ಸಮಸ್ಯೆಗಳಿಂದ ಬಳಲುತ್ತಿರುವುದನ್ನು ಕಾಣಬಹುದಾಗಿದೆ.

ಔದ್ಯೋಗಿಕರಣ ಉತ್ಪಾದಕ ಕೇಂದ್ರ ಮತ್ತು ಸಿದ್ಧ ವಸ್ತುಗಳ ನಿರ್ಮಾಣದ ಕಾರ್ಯಗಳ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ. ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಔದ್ಯೋಗಿಕರಣಕ್ಕೆ ಅತ್ಯಂತ ಮಹತ್ವವಿದೆ. ತೀವ್ರಗತಿಯ ಔದ್ಯೋಗಿಕರಣವಿಲ್ಲದೆ, ಆರ್ಥಿಕ ಅಭಿವೃದ್ಧಿ ಸಾಧ್ಯವಿಲ್ಲ. ಭಾರತದ ಆರ್ಥಿಕ ಬೆಳವಣಿಗೆಯನ್ನು ಔದ್ಯೋಗಿಕರಣವು ಪ್ರೋತ್ಸಾಹಿಸುವುದು. ರಾಷ್ಟ್ರೀಯ ಹಾಗೂ ತಲಾ ವರಮಾನವನ್ನು ವೃದ್ಧಿಸುತ್ತದೆ. ನಿರುದ್ಯೋಗ ಮತ್ತು ಅರೆನಿರುದ್ಯೋಗವನ್ನು ಕಡಿಮೆ ಮಾಡುತ್ತದೆ, ಕೃಷಿ ತೃತಿಯ ವಲಯದ ಉದ್ಯಮಗಳನ್ನು ಪ್ರೋತ್ಸಾಹಿಸುತ್ತದೆ, ಬೆಳವಣಿಗೆಯಿಂದ ಸ್ಥಿರತೆ ಮತ್ತು ವ್ಯಾಪಾರವನ್ನು ವಿಸ್ತರಿಸುತ್ತದೆ, ಸರ್ಕಾರಿ ವರಮಾನವನ್ನು ಹೆಚ್ಚಿಸುತ್ತದೆ, ರಾಷ್ಟ್ರೀಯ ರಕ್ಷಣೆ ಇಂತಹ ಎಲ್ಲಾ ಅನುಕೂಲಗಳು ಕೈಗಾರಿಕೆಗಳ ಮೂಲಕ ಕಾಣಬಹುದಾಗಿದೆ. ಸಾರ್ವಜನಿಕ ವಲಯದ ಕೈಗಾರಿಕೆಗಳಲ್ಲಿ ಕಬ್ಬಿಣ ಮತ್ತು ಉಕ್ಕು ಉದ್ಯಮ, ರಾಸಾಯನಿಕ ಗೊಬ್ಬರಗಳು, ಸಾರಿಗೆ ಉದ್ಯಮ ಕೈಗಾರಿಕೆಗಳ ಜೊತೆಯಲ್ಲಿ ಖಾಸಗಿ ವಲಯದ ಕೈಗಾರಿಕೆಗಳು ಮುಖ್ಯವಾಗಿವೆ. ಅವುಗಳಲ್ಲಿ ಹತ್ತಿ ಗಿರಣಿ ಕೈಗಾರಿಕೆ ಪ್ರಮುಖವಾಗಿದೆ. ಹತ್ತಿ ಎಂದರೆ 'ಹಿಂಜಿದ' ಅಥವಾ 'ಹಿಂಜುವ' ಅಥವಾ 'ನಿರುಪಯುಕ್ತ ಹತ್ತಿ', ಹತ್ತಿ ಹಿಂಜುವ (ಜಿನ್ನಿಂಗ್) ಕಾರ್ಖಾನೆ ಎಂದರೆ ಹವೆ ನೀರು ಅಥವಾ ವಿದ್ಯುತ್‌ಶ್ಚಕ್ತಿಯಿಂದ ಅಥವಾ ಇತರೇ ಯಾಂತ್ರಿಕ ಶಕ್ತಿಯನ್ನು ಬಳಸಿಕೊಂಡು ಹತ್ತಿ ಹಿಂಜುವ ಅಥವಾ ಹತ್ತಿ ಬೀಜವನ್ನು ಬೇರ್ಪಡಿಸುವ ಸ್ಥಳವಾಗಿದೆ. ಭಾರತೀಯ

ಕಾರ್ಖಾನೆ ಕಾಯ್ದೆ 1911ರಲ್ಲಿ ವಿವರಿಸಿದಂತೆ ಹತ್ತಿ ಹಿಂಜುವ ಕಾರ್ಖಾನೆ ಎಂದರೆ ಯಾವುದೇ ಹತ್ತಿಯನ್ನು ಒತ್ತಿ ಬೇಲ್‌ಗಳಾಗಿ ಮಾಡುವ ಕಾರ್ಖಾನೆ ಎಂದು ತಿಳಿಸುತ್ತದೆ ಹಾಗೂ ಕಾರ್ಮಿಕರು ಎಂದರೆ ವಿವಿಧ ಉದ್ಯೋಗದಲ್ಲಿ ನಿರತರಾಗಿರುವವರು ಎಂದರ್ಥ ಈ ಪರಿಕಲ್ಪನೆಯು ಕಾಲಮಾನಕ್ಕನುಗುಣವಾಗಿ ದುಡಿಯುವವರು ಒಪ್ಪಂದ ಅಥವಾ ತಾತ್ಕಾಲಿಕವಾಗಿ ದುಡಿಯುತ್ತಿರುವ ಮಹಿಳೆಯರನ್ನು ಒಳಗೊಂಡಿದೆ. ಒಟ್ಟಾರೆ ದುಡಿಯುವವರು ಎಂದರೆ ತಮ್ಮ ಜೀವನ ನಿರ್ವಹಣೆಗಾಗಿ ಹಾಗೂ ಹಣಗಳಿಕೆಗಾಗಿ ದುಡಿಮೆಯನ್ನು ಜೀವನದ ಒಂದು ಆಧಾರವಾಗಿದೆ. ಸಂಘಟಿತ ಕಾರ್ಮಿಕರು ಎಂಬುದು ಕೆಲಸಗಾರರನ್ನು ಒಳಗೊಂಡ ಒಂದು ಸಂಘಟಿತ ವಲಯವಾಗಿದೆ. ಈ ವಲಯದ ಉತ್ಪಾದನೆಯು ಆಧುನಿಕ ಸಂಬಂಧಗಳಿಂದ ಕೂಡಿದೆ ಮತ್ತು ಇದು ಕಾನೂನು ಹಾಗೂ ನಿಯಮಗಳಿಂದ ನಿರ್ದೇಶಿಸುತ್ತದೆ, ಅಲ್ಲದೆ ಕಾರ್ಮಿಕ ಸಂಘಟನೆಗಳ ರಕ್ಷಣೆ ಮತ್ತು ಅನುಕೂಲಕ್ಕಾಗಿ ಸಂಘಟಿತ ವಲಯ ಹೆಚ್ಚು ಆದ್ಯತೆ ನೀಡುತ್ತದೆ. ಆದ್ದರಿಂದ ಹತ್ತಿ ಹಿಂಜುವ ಕಾರ್ಖಾನೆಗಳೂ ಸಹ ಸಂಘಟಿತ ವಲಯವಾಗಿರುವುದರಿಂದ ಮಹಿಳಾ ಕಾರ್ಮಿಕರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಾನೂನುಗಳು ಹಾಗೂ ನಿಯಮಗಳೂ ಇವರಿಗೂ ಅನ್ವಯಿಸುತ್ತವೆ. ಔದ್ಯೋಗಿಕರಣ ಉತ್ಪಾದಕ ಕೇಂದ್ರ ಮತ್ತು ಸಿದ್ಧ ವಸ್ತುಗಳ ನಿರ್ಮಾಣದ ಕಾರ್ಯಗಳ ಅಭಿವೃದ್ಧಿಯನ್ನು ಒಳಗೊಂಡಿರುತ್ತದೆ.

**ಉಪಸಂಹಾರ**

ಒಟ್ಟಾರೆ ಇಂದಿನ ಜವಳಿ ಉದ್ಯಮ ಬಹುರಾಷ್ಟ್ರೀಯ ಕಂಪನಿಗಳ ಪೈಪೋಟಿಯಿಂದ ಅವಸಾನದ ಅಂಚಿಗೆ ಬಂದು ನಿಂತಿವೆ. ಬಹುರಾಷ್ಟ್ರೀಯ ಕಂಪನಿಗಳ ಉನ್ನತ ತಂತ್ರಜ್ಞಾನಾಧಾರಿತ ಕಡಿಮೆ ವೆಚ್ಚದ ಉತ್ಪನ್ನಗಳ ಎದುರು ಸಾಂಪ್ರದಾಯಿಕ ಜವಳಿ ಉದ್ಯಮ ಸಮಸ್ಯೆಗೆ ಸಿಲುಕಿದೆ. ವೈವಿಧ್ಯಮಯವಾದ ಆಧುನಿಕ ತಂತ್ರಜ್ಞಾನವುಳ್ಳ ಉದ್ಧಿಮೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಹಳೆಯ ತಂತ್ರಜ್ಞಾನವುಳ್ಳ ಉದ್ದಿಮೆಗಳು ಅವಸಾನ ಹೊಂದುತ್ತಿವೆ. ಹತ್ತಿ ಬಟ್ಟೆಗಳಿಗಿಂತ ವಿವಿಧ ರೀತಿಯ ಸಿಂತೆಟಿಕ್, ಫೈಬರ್, ಸ್ಪನ್, ಪಾಲಿಸ್ಟರ್ ಮುಂತಾದ ರೀತಿಯ ಹೊಸ ಹೊಸ ಮಾದರಿಯ ಬಟ್ಟೆಗಳು ಮಾರುಕಟ್ಟೆಗೆ ಬರುವುದರಿಂದ ಜನರು ಹೊಸ ವಿನ್ಯಾಸಗಳಿಗೆ ಮಾರು ಹೊಗುವುದರಿಂದ ಹತ್ತಿ ಉತ್ಪಾದನೆಯಿಂದ ಬರುವ ವಸ್ತುಗಳಿಗೆ ಮಾರುಕಟ್ಟೆ ಕೊರೆತೆ ಉಂಟಾಗಿದೆ. ಸಣ್ಣ ಪುಟ್ಟ ಜಿನ್ನಿಂಗ್ ಮಿಲ್‌ಗಳು ಹಂತ ಹಂತವಾಗಿ ಮುಚ್ಚುತ್ತಾ ಬರುತ್ತಿವೆ. ಇದರಿಂದಾಗಿ ಮಾಲೀಕರು ಆರ್ಥಿಕ ನಷ್ಟ ಹೊಂದುವುದರ ಜೊತೆಗೆ ತಮ್ಮನ್ನು ನಂಬಿಕೊಂಡ ದುಡಿಮೆಗಾರರಿಗೆ ಕೆಲಸವನ್ನು ಉಳಿಸಿಕೊಡುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಇದರಿಂದಾಗಿ ಬಹುತೇಕ ಕಾರ್ಮಿಕರು ಅಥವಾ ದುಡಿಮೆಗಾರರು ಕೆಲಸ ಕಳೆದುಕೊಂಡು ಆದಾಯದ ಮೂಲವನ್ನೆ ಕಳೆದುಕೊಂಡು ಸಂಕಷ್ಟದಲ್ಲಿರುವುದು. ಕೆಲವರು ಬೇರೊಂದು ಕಡೆ ಕೆಲಸವನ್ನು ಹುಡಿಕಿಕೊಂಡು ಹೋಗುತ್ತಿದ್ದಾರೆ, ಅಲ್ಲದೆ ಕಡಿಮೆ ಕೂಲಿ ಕೆಲಸಗಳನ್ನು ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ನೈಪುಣ್ಯತೆ ಇರುವವರೂ ಸಹ ಕೆಲಸ ಕಳೆದುಕೊಂಡು ಬೇರೆ ಕ್ಷೇತ್ರದಲ್ಲಿ ಮಾಲೀಕರು ನಿಗಧಿಪಡಿಸಿದ ಕೂಲಿಗೆ ಕೆಲಸ ಮಾಡುವಂತಾಗಿದೆ.

**ಪರಾಮರ್ಶನ ಗ್ರಂಥಗಳು**


- ಬಡ್ಡಿ ಎಂ ಎಂ. (2003). ಕಾರ್ಮಿಕ ಮತ್ತು ಔದ್ಯೋಗಿಕ ಕಾನೂನು, ಆಕಳವಾಡಿ ಬುಕ್ ಡಿಪೋ ವಿಜಯಾ ರೋಡ್, ದಾರವಾಡ. ಪು.ಸಂ.36–64.
- ಚಿನ್ನೀ ಎಂ ಡಿ. (2002). ಡಿಸ್‌ಪ್ಲೇಸಮೆಂಟ್ ಆಫ್ ಟೆಕ್ಸಟೈಲ್ಸ್ ವರ್ಕರ್ಸ್ ಅಂಡ್ ದೇರ್ ಪೊಸಿಷನ್ ಅ ಸೋಷಿಯೋ ಎಕನಾಮಿಕ್ ಅನಲಿಸಿಸ್ ಇನ್ ಇಚಲಕರಂಜಿ, ಶಿವಾಜಿ ಯುನಿವರ್ಸಿಟಿ, ಮಹಾರ್‍ಥಾಷ್ಟ್ರ.
- ಡ್ಯಾನಿಯಲ್ ಸತ್ಯವೀರ್ ಎಸ್. (1985) ಕಾರ್ಮಿಕ ಸಂಘಟನೆ ಮತ್ತು ಹೊಣೆಗಾರಿಕೆ, ಕರ್ನಾಟಕ ಕಾರ್ಮಿಕ ಪತ್ರಿಕೆ, ಕರ್ನಾಟಕ ಕಾರ್ಮಿಕ ಪತ್ರ, ಬೆಂಗಳೂರು.
- ಗಂಗಪ್ಪ ಕೆ ಹೆಚ್. (1981). ಕಾರ್ಮಿಕ ರತ್ನದ ಕೆಂಪು ಕಥೆ, ವಿನಾಯಕ ಪ್ರಿಂಟಿಂಗ್ ಪ್ರೆಸ್ ದಾವಣಗೆರೆ.
- ಹರೀಶ್ ತಿಗರಿ. (2019). ಅಸಂಘಟಿತ ವಲಯದಲ್ಲಿ ಆರ್ಥಿಕ ಚಟುವಟಿಕೆಗಳು ಮತ್ತು ಜೀವನೋಪಾಯ. ಜರ್ನಲ್ ಆಫ್ ಆರ್ಟ್ಸ್, ಹ್ಯುಮಾನಿಟಿಸ್ ಮತ್ತು ಸೋಶಿಯಲ್ ಸೈನ್ಸಸ್, ಸಂ.6. ಪುಣೆ.
- ಹನುಮಂತ ಜಿ, (2018). ಕೈಗಾರಿಕೆಗಳಲ್ಲಿ ಗುತ್ತಿಗೆ ಆದಾರದ ಮೇಲೆ ಕಾರ್ಯ ನಿರ್ವಹಿಸುವ ಕಾರ್ಮಿಕರಿಗಿರುವ ಸೌಲಭ್ಯಗಳ ಕುರಿತು ಒಂದು ಅಧ್ಯಯನ, ಪು.ಸಂ.32–34.
- ಜೆಬದೊರೈ, (2013). ಎ ಸ್ಟಡಿ ಆಫ್ ಸ್ಟೇಟಸ್ ಆಫ್ ಲೇಬರ್ಸ್ ಇನ್ ಸ್ಪಿನ್ನಿಂಗ್ ಮಿಲ್ ಆಫ್ ರಾಜಪಲ್ಯಮ್ ತಮಿಳುನಾಡು.
- ಕುಮಾರ್ ಬಿ ಪಿ. (2007). ದಾವಣಗೆರೆ ಹತ್ತಿ ಗಿರಣಿ ಕಾರ್ಮಿಕರ ಚಳುವಳಿಗಳು. ಪೂರ್ಣ ಪ್ರಕಾಶನ, ಶಿವಮೊಗ್ಗ.
- ಖುಲ್ಲಾರ್ ಡಿ ಆರ್. (2014). ಇಂಡಿಯಾ: ಎ ಕಾಂಪ್ರಹೆನ್ಸಿವ್ ಜೀಯೊಗ್ರಫಿ. ಕಲ್ಯಾಣಿ ಪಬ್ಲಿಷರ್ಸ್, ನವ ದೆಹಲಿ.
- ನಾಗಮೋಹನ್ ದಾಸ್ ಹೆಚ್ ಎನ್. (2016). ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತೆ ಕಾಯ್ದೆಯ ನ್ಯೂನತೆಗಳು. ಜನಶಕ್ತಿ
- ರಂಗ ಎನ್.ಎಸ್. (1930). ಎಕನಾಮಿಕ್ ಅಂಡ್ ಸೋಷಿಯಲ್ ಕಂಡೀಷನ್ ಆಫ್ ಹ್ಯಾಂಡಲೂಮ್ ವೀವಿಂಗ್ ಇಂಡಸ್ಟ್ರೀ. ತರಪೊರೆವಾಲಾ & ಸನ್ಸ್, ಬಾಂಬೆ.
- ಸುಧಾಕರ್ ವಿಷ್ಣು ಚೌಗುಲೆ, ಕೆ.ಎ.ಮಾಲಿ ಮತ್ತು ಎಂ.ಬಿ.ಪೋಟ್ದಾರ್. (2015). ದ ಸ್ಟಡಿ ಆಫ್ ಸ್ಟೇಟಸ್ ಆಫ್ ವರ್ಕರ್ಸ್ ಇನ್ ರಾಜೀವ್ ಸ್ಪಿನ್ನಿಂಗ್ ಮಿಲ್. ಇಂಡಿಯನ್ ಸ್ಟ್ರೀಮ್ಸ್ ರೀಸರ್ಚ್ ಜರ್ನಲ್, ಸಂ.5(8), ಲಕ್ಷ್ಮಿ ಬುಕ್ ಪಬ್ಲಿಕೇಷನ್, ಮಹಾರಾಷ್ಟ್ರ.

- ಸ್ವರ್ಣಲತಾ ಬಿ, (2016). ಗುತ್ತಿಗೆ ಕಾರ್ಮಿಕರ ಕಾರ್ಯ ತೃಪ್ತಿಯ ಕುರಿತು ಒಂದು ಅಧ್ಯಯನ. ಇಂಟರ್ ನ್ಯಾಷಿನಲ್ ಜರ್ನಲ್ ಆಫ್ ವರ್ಲ್ಡ ರಿಸರ್ಚ್,
- ವರ್ಗಿಸ್ ಮತ್ತು ಸಲೀಂ, (2015). ಹ್ಯಾಂಡಲೂಮ್ ಇಂಡಸ್ಟ್ರೀ ಇನ್ ಕೇರಳ: ಎ ಸ್ಟಡಿ ಆಫ್ ಪ್ರಾಬ್ಲೆಮ್ಸ್ ಅಂಡ್ ಚಾಲೆಂಜಸ್. ಇಂಟರ್ ನ್ಯಾಷನಲ್ ಜರ್ನಲ್ ಆಫ್ ಮ್ಯಾನಜ್‌ಮೆಂಟ್ ಅಂಡ್ ಸೋಷಿಯಲ್ ಸೈನ್ಸ್ ರೀಸರ್ಚ್ ರಿವೀವ್, ಸಂ1 (14).